# ಗಾಂಧಿ ನಗೆಯೊಳಗಿನ ನವನೀತ

‘ಹಾಸ್ಯಪ್ರಜ್ಞೆ ಇರದಿದ್ದರೆ ನಾನೆಂದೋ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಿದ್ದೆ’ ಎಂದವರು ಹಾಸ್ಯ ಸಾಹಿತಿಯೋ ನಟರೋ ಅಲ್ಲ. ಸೂರ್ಯ ಮುಳುಗದ ಸಾಮ್ರಾಜ್ಯಾಧಿಪತಿಗಳನ್ನು ಎದುರುಹಾಕಿಕೊಂಡು ಅಹಿಂಸೆಯ ಮಾರ್ಗದಿಂದಲೇ ಸ್ವಾತಂತ್ರ್ಯ ದೊರಕಿಸಿಕೊಟ್ಟ ಮಹಾತ್ಮಾ ಗಾಂಧಿ. ಆ ಹಾಸ್ಯಪ್ರಜ್ಞೆ ಯಾವ ಬಗೆಯದು? ಇಲ್ಲಿವೆ ಕೆಲವು ಸ್ಯಾಂಪಲ್!



■ ನಾರಾಯಣ ರಾಯಚೂರ್

ಕಲೆ: ಎಂ.ಎಸ್. ಮೂರ್ತಿ

ಒಮ್ಮೆ ಪ್ರಸಿದ್ಧ ಕಲಾವಿದರೊಬ್ಬರು ಗಾಂಧೀಜಿಯವರ ಚಿತ್ರವನ್ನು ರಚಿಸಿ ಆಟೊಗ್ರಾಫ್‌ಗಾಗಿ ಕಳುಹಿಸಿಕೊಟ್ಟರಂತೆ. ಆ ಸುಂದರ ಕಲಾಕೃತಿಯನ್ನು ಕಲಾವಿದರಿಗೆ ಮರಳಿ ಕಳುಹಿಸುತ್ತ ಗಾಂಧೀಜಿ ಬರೆದರಂತೆ – ‘ಯಾರು ಈ ಕುರೂಪಿ? ಈತನನ್ನು ನೀವು ಒಬ್ಬ ಮಹಾನ್ ಮಾದರಿ ವ್ಯಕ್ತಿಯನ್ನಾಗಿ ಮಾಡಿ ಕಳಿಸಿದ್ದೀರಲ್ಲ! ಇದು ಪ್ರಮಾದವಶಾತ್ ನಂಗೆ ಬಂದಿರುವ ಚಿತ್ರವಲ್ಲ ತಾನೇ?!’

ಇನ್ನೊಂದು ಪ್ರಸಂಗವನ್ನು ನೋಡೋಣ. ಗಾಂಧೀಜಿಗೆ ತಮ್ಮ ಪ್ರೀತಿಪಾತ್ರರ ಕೆನ್ನೆಯನ್ನು (ಮೃದುವಾಗಿ) ತಟ್ಟುವ ಅಭ್ಯಾಸವಿತ್ತಂತೆ. ಇದನ್ನು ಗಮನಿಸಿದ ಗಡ್ಡಧಾರಿ ‘ಗಡಿನಾಡ ಗಾಂಧಿ’ ಖಾನ್ ಅಬ್ದುಲ್ ಗಫಾರ್ ಖಾನ್, ‘ಬಾಪು, ನಿಮ್ಮ ಪ್ರೀತಿಪಾತ್ರರನ್ನು ಕೆನ್ನೆ ತಟ್ಟಿ ಪ್ರೀತಿ ವ್ಯಕ್ತಪಡಿಸುತ್ತೀರಿ. ನಾನು ಪ್ರೀತಿಪಾತ್ರನಲ್ಲವೇ? ನನಗೇಕೆ ಆ ಭಾಗ್ಯವಿಲ್ಲ’ ಎಂದರಂತೆ ತಮ್ಮ ಕುರುಚಲು ಗಡ್ಡವನ್ನು ನೀವುತ್ತಾ!

ಗಾಂಧೀಜಿ ಕುರಿತಂತೆ ಅನೇಕಾನೇಕ ರಸಪ್ರಸಂಗಗಳುಂಟು. ಗಮನಿಸಿ, ಗಾಂಧೀಜಿಯವರ ಭಾವಚಿತ್ರಗಳಿರಲಿ, ಅಂಚೆಚೀಟಿ ಇರಲಿ, ಪ್ರತಿಮೆಗಳಿರಲಿ, ಸದಾ ನಗುಮೊಗದ ಆಕೃತಿಗಳೇ ಆಗಿರುತ್ತವೆ. ಅಷ್ಟೇ ಯಾಕೆ, ನಾವು ನಿತ್ಯವೂ ಬಳಸುವ ಕರೆನ್ಸಿ ನೋಟುಗಳ ಮೇಲೆ ಎದ್ದು ಕಾಣುವ ಮಹಾತ್ಮಾಜಿ ಚಿತ್ರ ಕೂಡ ನಗುಮೊಗದ್ದೆ.

ಹಾಸ್ಯಪ್ರಿಯರೊಬ್ಬರು ಕೇಳಿದರಂತೆ – ‘ಹೇಳಿ, ನೋಟುಗಳ ಮೇಲಿನ ಗಾಂಧಿ ಯಾಕೆ ನಗುತ್ತಿದ್ದಾರೆ?’ ಇನ್ನೊಬ್ಬ ಹಾಸ್ಯಪಟು ಉತ್ತರ – ‘ಅತ್ತರೆ ನೋಟು ಒದ್ದೆಯಾಗಿಬಿಡುತ್ತೆ, ಅದಕ್ಕೆ!’ ಮುಂದುವರಿದು, ಇನ್ನೊಂದು ಪ್ರಶ್ನೆ ಎಸೆದರಂತೆ. ‘ಗಾಂಧೀಜಿಗೆ ಕನ್ನಡಿ ಎಂದರೆ ತುಂಬಾ ಇಷ್ಟ – ಯಾಕೆ?’ ಕೊಂಚ ಯೋಚಿಸಿ ಹಾಸ್ಯಪಟು ಹೇಳಿದರಂತೆ – ‘ಕನ್ನಡಿ ಎಂದೂ ಸುಳ್ಳು ಹೇಳುವುದಿಲ್ಲ!’ ಎಷ್ಟು ನಿಜವಲ್ಲವೇ! ಸತ್ಯ ಪ್ರತಿಪಾದಕ ಬಾಪೂಗೆ ಸತ್ಯ ಸಾರುವ ವ್ಯಕ್ತಿಗಳು ಮಾತ್ರವಲ್ಲ, ವಸ್ತುಗಳೂ ಪ್ರಿಯ!

ಈ ನಗು ಈಗ ವಿಡಂಬನೆಯ ಅರ್ಥವನ್ನೂ ಪಡೆದಿರಬಹುದಲ್ಲವೇ? ಖಾದಿ ಧರಿಸಿ, ಗಾಂಧೀ ಟೋಪಿ ಹಾಕಿಕೊಂಡು, ಗಾಂಧೀಜಿ ಹೆಸರಿನಲ್ಲಿ ಏನೆಲ್ಲ ಭಂಡತನ, ವಂಚನೆ, ಮೋಸ ಮಾಡುತ್ತಿರುವರಲ್ಲ ಎಂಬ ಮಾರ್ಮಿಕ ಅಂಶವೂ ಇಲ್ಲಿರಬಹುದೇ?

ಒಬ್ಬ ಅಮೆರಿಕದ ಮಹಿಳೆ ಗಾಂಧೀಜಿಯವರನ್ನೊಮ್ಮೆ ಕೇಳಿದಳಂತೆ – ‘ನೀವು ಅಮೆರಿಕಗೆ ಯಾವಾಗ ಬರುತ್ತೀರಿ? ಜನ ನಿಮ್ಮನ್ನು ನೋಡಲು ಕಾತುರರಾಗಿದ್ದಾರೆ’. ಅದಕ್ಕೆ ಮೊನಚು ಹಾಸ್ಯದ ಬಾಪೂ ಉತ್ತರ – ‘ಹೌದು ಹೌದು... ನಾನದನ್ನು ಬಲ್ಲೆ. ಅವರು ಮೃಗಾಲಯದ ಒಂದು ಪಂಜರವನ್ನೂ ಸಿದ್ಧಪಡಿಸಿಕೊಂಡು ಕಾಯುತ್ತಿದ್ದಾರಂತೆ, ಈ ವಿಚಿತ್ರ ಪ್ರಾಣಿಯನ್ನು ಕಣ್ತುಂಬಿಸಿಕೊಳ್ಳಲು!’.

ಇನ್ನೊಂದು ಸ್ವಲ್ಪ ಪ್ರಚಲಿತ ಹಾಸ್ಯಪ್ರಸಂಗ. ಮತ್ತೆ ನೆನಪಿಸಿಕೊಳ್ಳಬಲ್ಲಂಥದ್ದು. ಒಮ್ಮೆ ಒಬ್ಬ ಪತ್ರಕರ್ತ ಬಾಪೂಜಿಯವರನ್ನು ಕೇಳಿದರಂತೆ – ‘ನೀವು ಯಾವಾಗಲೂ ಥರ್ಡ್ ಕ್ಲಾಸ್‌ನಲ್ಲೇ ಏಕೆ ಪ್ರಯಾಣಮಾಡುತ್ತೀರಿ?’ ಬಾಪೂ ಹೇಳಿದರಂತೆ – ‘ಏನು ಮಾಡಲಿ? ಫೋರ್ಥ್ ಕ್ಲಾಸ್ ಇಲ್ಲವಲ್ಲ!’

ದುಂಡು ಮೇಜಿನ ಪರಿಷತ್ ಸಭೆಯಲ್ಲಿ ಪಾಲ್ಗೊಳ್ಳಲು ಬಾಪೂ ತಮ್ಮ ತುಂಡುಬಟ್ಟೆ ಪೋಷಾಕಿನಲ್ಲೇ ಇಂಗ್ಲೆಂಡ್‌ಗೆ ಹೋದಾಗ ಪತ್ರಕರ್ತರೊಬ್ಬರು ಕೇಳಿದರಂತೆ – ‘ಇಂಗ್ಲೆಂಡ್ ದೊರೆಯ ಸಭೆಗೆ ಬಂದಿರುವ ನೀವು, ತಕ್ಕ ಪೋಷಾಕು ಧರಿಸಿದ್ದೀರೆಂದು ನಿಮಗನಿಸುತ್ತದೆಯೇ?’. ‘ನನ್ನ ಪೋಷಾಕಿನ ಬಗ್ಗೆ ಚಿಂತೆ ಬಿಡಿ. ನಮಗಿಬ್ಬರಿಗೂ ಆಗುವಷ್ಟು ಬಟ್ಟೆಗಳನ್ನು ನಿಮ್ಮ ದೊರೆ ಧರಿಸಿದ್ದಾರಲ್ಲ!’ – ಬಾಪೂ ಮಾರ್ಮಿಕ ಉತ್ತರ.

ಚಾಪ್ಲಿನ್ ಮತ್ತು ಗಾಂಧಿ – ಇಬ್ಬರೂ ವಿಶ್ವಮಾನ್ಯರು. ಹಾಸ್ಯದ ಬಗ್ಗೆ ಇಬ್ಬರಿಗೂ ಸಮಾನ ಒಲವು. ಚಾಪ್ಲಿನ್ ಚಿತ್ರಿಸಿದ ಹಲವು ನಗೆಚಿತ್ರಗಳ ಅಂತರಾಳದಲ್ಲಿ ಜನರ, ಅದರಲ್ಲೂ ಬಡ ಮತ್ತು ಶೋಷಿತರ ಸಮುದಾಯದ ಬಗ್ಗೆ ಅಪಾರ ಕಳಕಳಿ. 1931ರಲ್ಲಿ ಇಂಗ್ಲೆಂಡ್‌ನಲ್ಲಿ ಇಬ್ಬರ ಭೇಟಿ. ಚಾಪ್ಲಿನ್ ಆ ಭೇಟಿಯನ್ನು ಅವಿಸ್ಮರಣೀಯ ಎನ್ನುತ್ತಾ – ‘ನಾನು ಭೇಟಿಮಾಡಿದ ಅತ್ಯಂತ ಚೇತೋಹಾರಿ ವಕ್ತಿಗಳಲ್ಲಿ ಗಾಂಧೀಜಿ ಅಗ್ರಗಣ್ಯರು. ನಾನವರಿಂದ ಬಹಳ ಪ್ರಭಾವಿತನಾದೆ. ಯಂತ್ರ ಬಳಕೆಯ ವಿಚಾರವಾಗಿ ನಾವು ಬಹಳ ಚರ್ಚಿಸಿದೆವು. ನನ್ನ ಮಾಡ್ರನ್ ಟೈಮ್ಸ್ ಸಿನಿಮಾದ ಪ್ರೇರಕರು ಅವರೇ’ ಎಂಬ ಮೆಚ್ಚುಗೆಯ ಮಾತನಾಡಿದ್ದಾರೆ.

ಗಾಂಧೀಜಿ ಇದ್ದಲ್ಲೆಲ್ಲ ನಗು ಪಸರಿಸಿ ವಾತಾವರಣ ಪ್ರಫುಲ್ಲವಾಗಿರುತ್ತಿತ್ತು ಎನ್ನುವುದು ಅವರ ನಿಕಟ ಆಶ್ರಮವಾಸಿಗಳ ಅಂಬೋಣ. ಆಶ್ರಮದಲ್ಲಿ ತಮ್ಮ ಶಿಷ್ಯರು, ಬಂಧುಗಳು, ಗೆಳೆಯರಿಗಳಿಗೆಲ್ಲ ಹಾಸ್ಯದ ಮುದ್ದಿನ ಹೆಸರಿನಿಂದಲೇ ಗಾಂಧೀಜಿ ಕರೆಯುತ್ತಿದ್ದರಂತೆ. ಒಂದೆರಡು ಸ್ಯಾಂಪಲ್: ಪ್ರಿಯ ಶಾಂತಿದೂತ, ಪ್ರಿಯ ಬುಲ್‌ಬುಲ್, ನನ್ನಾತ್ಮ ರಕ್ಷಕ, ನನ್ನ ಪ್ರಿಯ ನೊಣವೇ, ಪ್ರಿಯ ಅಮ್ಮಾಜಾನ್, ಮುದ್ದಿನ ಕುರಿಮರಿಯೆ!

ಗಾಂಧೀಜಿಯನ್ನು ಕೈಲಾಸಂ ಅವರು ಒಂದು ಸವಿಯಾದ ತಿನಿಸಿನಂತೆ ಕಲ್ಪಿಸಿಕೊಂಡು, ಆ ‘ಪಾಕ ಪದಾರ್ಥ’ವನ್ನು ಮಾಡುವ ವಿಧಾನವನ್ನು ಹೀಗೆ ವಿವರಿಸಿದ್ದಾರೆ: ‘ಒಂದು ಹಿಡಿ ಮೂಳೆ, ಚಕ್ಕಳ ಅಷ್ಟೇ. ಅದಕೆ ಸುರಿ ಮೂರೋ ನಾಲ್ಕೋ ಚಮಚ ರಕ್ತ ಮಾಂಸ. ಜೊತೆಗಿರಿಸು ಕಡಲಿನಾಳದ ಮನಸ. ಪ್ರೇಮ ತುಂಬಿದ ಎದೆಯ. ಹಚ್ಚು ಮೊರ ಕಿವಿಯೆರಡ, ಎರಡು ಪಿಳಿ ಪಿಳಿ ಕಣ್ಣು, ಹಾಲು ಹಸುಳೆಯ ಮಂದಹಾಸವನ್ನು ಲೇಪಿಸದಕೆ’.

ಇಂದಿನ ಪಿಜ್ಜಾ, ನೂಡಲ್ಸ್, ಪೆಪ್ಸಿ ಕಾಲದಲ್ಲಿ ಕೈಲಾಸಂರ ಗಾಂಧಿ ತಿನಿಸಿನ ರೆಸಿಪಿ ಎಷ್ಟು ಜನರಿಗೆ ಇಷ್ಟವೋ? ಕೊನೆಯ ಪಕ್ಷ ಗಾಂಧಿ ಜನಿಸಿದ ಅಕ್ಟೋಬರ್ 2ರ ದಿನವಾದರೂ ಗಾಂಧಿ ತತ್ತ್ವಾದರ್ಶಗಳನ್ನು ಚಪ್ಪರಿಸೋಣ/ಪಾಲಿಸೋಣ! ‘ಗಾಂಧಿ ಜಯಂತಿಯ ದಿನ ನಿಜ ಹೇಳೋಣ. ಸುಳ್ಳಿಗೆ ಮಿಕ್ಕ ಮುನ್ನೂರಾ ಅರವತ್ತನಾಲ್ಕು ದಿನಗಳು ಇದ್ದೇ ಇವೆಯಲ್ಲ!’ – ವರಕವಿ ಬೇಂದ್ರೆ ವಾಣಿ ಕಿವಿಯಲ್ಲಿ ಅನುರಣಿಸುತ್ತಲೇ ಇದೆ.

ಪ್ರತಿಕ್ರಿಯಿಸಿ: feedback@sudha.co.in